# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 29930/2024

| | |
|---|---|
| ಸಾಕ್ಷಿದಾರರ ಹೆಸರು : | ಸುಧಾಕರ್ ಆರ್. |
| ತಂದೆಯ ಹೆಸರು : | ಲೇಟ್. ರಾಮಪ್ಪ |
| ವಯಸ್ಸು : | 31 ವರ್ಷ |
| ಉದ್ಯೋಗ : | ಚಾಲಕ |
| ವಾಸ : | ಬೊಮ್ಮನಹಳ್ಳಿ, ಬೆಂಗಳೂರು. |

**ದಿನಾಂಕ 03/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ಚಾಸಾ-2 ರಿಂದ 6 ರವರು ನನಗೆ ಗೊತ್ತಿಲ್ಲ. ಆರೋಪಿತರು ನನ್ನ ಸ್ನೇಹಿತರು. 1ನೇ ಆರೋಪಿಯು ನನಗೆ ಹಣ ಕೊಡಬೇಕಾಗಿತ್ತು. 2024 ರಲ್ಲಿ ನಾನು 1ನೇ ಆರೋಪಿಯ ಬಳಿ ಹೋಗಿ ನಾನು ಹಣ ಕೇಳಿದ್ದೇನೆ, ಆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಮತ್ತು ನನ್ನ ಮದ್ಯದಲ್ಲಿ ಮಾತಿಗೆ ಮಾತು ಆಗಿರುತ್ತದೆ. 1ನೇ ಆರೋಪಿ ನನಗೆ ಹಣ ಕೊಡಲಿಲ್ಲವೆಂದು ಹೋಗಿ ನಾನು ಪೊಲೀಸರಿಗೆ ತಿಳಿಸಿದ್ದೇನೆ. ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ಸಾಕ್ಷಿಯು ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **ಆದ್ದರಿಂದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.** ಸಾಕ್ಷಿಗೆ ಪಂಚನಾಮೆ ತೋರಿಸಿದಾಗ ಸಾಕ್ಷಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. **ಆದ್ದರಿಂದ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.** ಪೆನ್ ಸ್ಟ್ಯಾಂಡ್,

ಫೋಟೋ ಫ್ರೇಮ್ ಮತ್ತು ವಾಟರ್ ಬಾಟಲ್ ನ್ನು ನಾನು ಪೊಲೀಸರ ಮುಂದೆ ಹಾಜರು ಪಡಿಸಿಲ್ಲ ಮತ್ತು ಪೊಲೀಸರು ಯಾವುದೇ ಪಂಚನಾಮೆ ನನ್ನ ಸಮಕ್ಷಮ ಮಾಡಿಲ್ಲ. ನಿಪಿ-2 ರ ಮೇಲಿರುವ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಎರಡು ದಿನಗಳ ನಂತರ ಮಾಡಿರುತ್ತೇನೆ. ನಿಪಿ-1 ಮತ್ತು 2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಪೆನ್ **ಸ್ಟ್ಯಾಂಡ್**, ಫೋಟೋ ಫ್ರೇಮ್ ಮತ್ತು ವಾಟರ್ ಬಾಟಲ್ ನಿಂದ ನನಗೆ ಹಲ್ಲೆ ಮಾಡಿಲ್ಲ. ನನಗೆ ಆರೋಪಿತರು ಹಲ್ಲೆ ಮಾಡಿದ್ದರಿಂದ ನನಗೆ ಹಲ್ಲು ಮುರಿದಿರಲಿಲ್ಲ. ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಲಿಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಹಿ.ಸ.ಸ.ಆ ರವರಿಂದಃ**

3. ದಿನಾಂಕ 20/07/2024 ರಂದು ರಾತ್ರಿ 10.15 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-4 ರಿಂದ 6 ರವರು ಬಿ.ಸಿ.ಎಸ್. ಎಂಟರಪ್ರೈಸಸ್ ಕಛೇರಿಯ ಬಳಿ ನಿಂತಿದ್ದಾಗ ಆರೋಪಿತರು ಅಲ್ಲಿಗೆ ಬಂದು, 1ನೇ ಆರೋಪಿಯು ಚಾಸಾ-4 ರವರನ್ನು ತಳ್ಳಿ ನನ್ನನ್ನು ಕಛೇರಿಯ ಒಳಗೆ ಎಳೆದುಕೊಂಡು ಹೋದರು, ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಗುದ್ದಿದನು, 2ನೇ ಆರೋಪಿಯು ಪೆನ್ **ಸ್ಟ್ಯಾಂಡ್**, ನಿಂದ ನನ್ನ ಬಲಕಿವಿಗೆ ಹೊಡೆದನು, 1ನೇ ಆರೋಪಿಯು ಫೋಟೋ ಫ್ರೇಮ್ ತೆಗೆದುಕೊಂಡು ನನ್ನ ಮುಖದ ಮೇಲೆ ಹೊಡೆದ ಮತ್ತು 2ನೇ ಆರೋಪಿಯು ವಾಟರ್ ಬಾಟಲ್ ನ್ನು ತೆಗೆದುಕೊಂಡು ನನ್ನ ಮೈಮೇಲೆ ಹೊಡೆದು, 3 ಮತ್ತು 4 ನೇ ಆರೋಪಿತರು ನನಗೆ ಕೈಯಿಂದ ಹಲ್ಲೆ ಮಾಡಿ, ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. ಬಿಡಿಸಲು ಬಂದ ಚಾಸಾ-4 ರವರಿಗೆ 3 ಮತ್ತು 4 ನೇ ಆರೋಪಿತರು ಅಡ್ಡಗಟ್ಟಿ ಹಿಡಿದುಕೊಂಡರು ಎಂದರೆ ಸರಿಯಲ್ಲ. ಈ ಘಟನೆಯಿಂದ ನನ್ನ ಮೇಲ್ಭಾಗದ ಹಲ್ಲು ಮುರಿದಿರುತ್ತದೆ ಎಂದರೆ ಸರಿಯಲ್ಲ.

4. ಅದೇ ದಿನ ಸದರಿ ಘಟನೆಯ ಬಗ್ಗೆ ನಾನು ಪೊಲೀಸ್ ಠಾಣೆಗೆ ಹೋಗಿ ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ದೂರು ಕೊಟ್ಟ ಎರಡು ದಿನಗಳ ನಂತರ ನಾನು ತೋರಿಸಿದ ಸ್ಥಳದಲ್ಲಿ ಪೊಲೀಸರು ಮದ್ಯಾಹ್ನ 01.00 ರಿಂದ 02.00 ಗಂಟೆಯವರೆಗೆ ನಿಪಿ-2 ರಂತೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಸಮಯದಲ್ಲಿ ನಾನು ಹಾಜರು ಪಡಿಸಿದ ಪೆನ್ **ಸ್ಟ್ಯಾಂಡ್**, ಫೋಟೋ ಫ್ರೇಮ್ ಮತ್ತು ವಾಟರ್ ಬಾಟಲ್ ಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

5. ದಿನಾಂಕ 25/07/2024 ರಂದು ಘಟನೆಯ ಬಗ್ಗೆ ಮುಂದುವರಿದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಸಮಕ್ಷಮ 'ನಾನು .......... ಗೊತ್ತಿಲ್ಲ' ಎಂಬುದಾಗಿ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. **ಸಾಕ್ಷಿಯ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು**. ನಾನು ಮತ್ತು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿ ಮಾಡಿಕೊಂಡಿರುವ ಕಾರಣ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ್ದರೂ ಸಹ ಹಲ್ಲೆ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಏನು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.